ಶುಶ್ರೂಷಾ ಯೋಜನೆಯ ಉದ್ದೇಶಗಳು

1019 (1467): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶುಶ್ರೂಷಾ ಯೋಜನೆಯ ಉದ್ದೇಶ ಸಫಲವಾಗುತ್ತಿದೆಯೇ;

ಆ) ಇಲ್ಲಿಯವರೆಗೆ ಸರ್ಕಾರವು ವ್ಯವಸ್ಥೆಗೊಳಿಸಿರುವ ಶಿಬಿರಗಳೆಷ್ಟು; ಹಾಗೂ ತಪಾಸಣೆ ನಡೆಸಲಾಗಿರುವ ಜನರ ಸಂಖ್ಯೆ ಎಷ್ಟು;

ಇ) ಮಾಗಡಿ ತಾಲ್ಲೂಕಿನಲ್ಲಿ ನಡೆಸಲಾಗಿರುವ ಶಿಬಿರಗಳೆಷ್ಟು ಹಾಗೂ ತಪಾಸಣೆ ನಡೆಸಲಾಗಿರುವ ಜನರ ಸಂಖ್ಯೆ ಎಷ್ಟು;

ಈ) 1993-94ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕಿನಲ್ಲಿ ನಡೆಸಲು ಉದ್ದೇಶಿಸಿರುವ ಶಿಬಿರಗಳೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು.

ಆ) 1-7-91ರಿಂದ 31-12-92ರವರೆಗೆ ಏರ್ಪಡಿಸಿದ ಶಿಬಿರಗಳು 6,678
ತಪಾಸಣೆಗೆ ಒಳಗಾದವರ ಸಂಖ್ಯೆ: 9,14,430

ಇ) 1-7-91ರಿಂದ 31-12-92ರವರೆಗೆ ಏರ್ಪಡಿಸಿದ ಶಿಬಿರಗಳು 30
ತಪಾಸಣೆಗೆ ಒಳಗಾದವರ ಸಂಖ್ಯೆ5,874

ಈ) ತಾಲ್ಲೂಕಿನ ಮಂಡಲ ಪಂಚಾಯಿತಿಗಳಲ್ಲಿ ಆರು ತಿಂಗಳಿಗೆ ಒಂದು ಶಿಬಿರದಂತೆ ನಡೆಸಲು ಉದ್ದೇಶಿಸಲಾಗಿದೆ.

ಸೇಡಂ ತಾಲ್ಲೂಕಿನ ತರವಳ್ಳಿ ಗ್ರಾಮದ ಶಾಲೆ ಕಟ್ಟಡ ಕುರಿತು

1021 (1595): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತರವಳ್ಳಿ ಗ್ರಾಮದಲ್ಲಿ ತಾಲ್ಲೂಕು ಬೋರ್ಡ್ ವತಿಯಿಂದ ಒಂದು ಶಾಲೆ ಕೋಣೆ ನಿರ್ಮಾಣ ಮಾಡಿ ಅದೇ ವರ್ಷ ಮಳೆಗಾಲದಲ್ಲಿ ಬಿದ್ದು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಶಾಲೆಯ ಕಟ್ಟಡ ಯಾವ ಶೀರ್ಷಿಕೆಯ ಹಣದಲ್ಲಿ ಮಂಜೂರಾಗಿ ಕಟ್ಟಲಾಗಿದೆ;

ಇ) ಆ ಸಾಲಿನಲ್ಲಿ ಈ ಶೀರ್ಷಿಕೆಯ ಹಣದಲ್ಲಿ ಸೇಡಂ ತಾಲ್ಲೂಕಿನಲ್ಲಿ ಒಟ್ಟು ಶಾಲೆಯ ಕೋಣೆಗಳು ನಿರ್ಮಾಣ ಮಾಡಿದ್ದು ಎಷ್ಟು;

ಈ) ತಾಲ್ಲೂಕಿನ ಒಟ್ಟು ಶಾಲೆಯ ಕೋಣೆಗಳಿಗೆ ತಗುಲಿರುವ ಖರ್ಚು ಎಷ್ಟು; (ಗ್ರಾಮವಾರು ವಿವರ ನೀಡುವುದು);

ಉ) ಈಗ ಈ ಕೋಣೆಗಳೂ ಸುಸ್ಥಿತಿಯಲ್ಲಿ ಹಾಗೂ ದುಸ್ಥಿತಿಯಲ್ಲಿ ಇರುವ ಗ್ರಾಮಗಳಾವುವು ? (ವಿವರ ನೀಡುವುದು)